ಸಿ.ಎನ್. ನಾಗರಾಜ್, ಬೆಂಗಳೂರು
ಆದಿಪುರುಷ ಬ್ರಹ್ಮನಿಗೆ ಏಕೆ ಪೂಜೆಯಿಲ್ಲ?



ಅವನು ವರ ಕೊಡದೆಯೇ ಇಷ್ಟು ಜನಸಂಖ್ಯೆ! ಪೂಜಿಸಿದರೆ ಮತ್ತಷ್ಟು ವರ ಕೊಟ್ಟುಬಿಟ್ಟಾನೆಂಬ ಭಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ರಾಹುಕಾಲದಲ್ಲಿ ಪ್ರೀತಿ ಮಾಡಿ, ಯಮಗಂಡಕಾಲದಲ್ಲಿ ಮದುವೆಯಾದರೆ ಮೊದಲ ರಾತ್ರಿ ಯಾವಾಗ?
ಬ್ರಾಂದಿ ಮುಹೂರ್ತದಲ್ಲಿ.

ಸುಲೋಚನ ಜಿ. ರಾವ್, ಬೆಂಗಳೂರು
ನೆನಪು ಗರಗಸದಂತೆ; ಹೋಗುತ್ತಾ ಬರುತ್ತಾ ಕೊಯ್ಯುತ್ತೆ. ಮರೆವು?
ಕೊಯ್ದು ಗುರುತೂ ಅಳಿಸಿಹೋಗುವಂತೆ ಹಚ್ಚಲಾಗುವ ನೈಸರ್ಗಿಕ ಮುಲಾಮು.

ಪಿ.ಜಿ. ರಾಘವೇಂದ್ರ, ಮೈಸೂರು
ಗಂಡ–ಹೆಂಡತಿ ಒಟ್ಟಿಗೆ ಇದ್ದರೆ ಅದನ್ನೇ 'ಅವಿಭಕ್ತ ಕುಟುಂಬ' ಎನ್ನುವರಲ್ಲಾ?



ಸರಿಯೇ ಇದೆಯಲ್ಲ. ಅ–ಅವಳಿಗೆ;
ವಿ–ವಿನೀತ; ಭಕ್ತನ ಕುಟುಂಬ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಪಬ್, ಬಾರ್‌ಗಳು ಸಮಾಜಕಂಟಕ ಎಂದು ಗೊತ್ತಿದ್ದರೂ ಸರ್ಕಾರ ಅವಕ್ಕೆ ಲೈಸೆನ್ಸ್ ಕೊಡುವುದೇಕೆ?
ಮದ್ಯದ ಬ್ಯಾರಲ್ಲೇ ಚುನಾವಣಾರಥದ ಚಕ್ರವಾಗಿ ಜೋಡಣೆಯಾಗುವುದರಿಂದ.

ಬಿ.ಆರ್. ಉಷಾ, ಕೆನಡಾ
ಹಿಂದೆ ಅಜ್ಜಿಯರು ತಲೆಗೆ ಗಂಟು ಹಾಕಿಕೊಳ್ಳುತ್ತಿದ್ದರು. ಏಕೆ?
ಅಜ್ಜನ ಹುಬ್ಬುಗಂಟಿಗೆ ಮ್ಯಾಚಿಂಗ್ ಆಗಿರಲೆಂದು.

ಸುರೇಶ್ ಬಿ.ವಿ. ಬೆಂಗಳೂರು
ನೆಮ್ಮದಿಯ ನಾಳೆಗಳನ್ನು ಪಡೆಯುವುದು ಹೇಗೆ ಸ್ವಾಮಿ?
ಭವಿಷ್ಯದ ಕಟ್ಟಡಕ್ಕೆ ವರ್ತಮಾನದ ಬುನಾದಿ ಹಾಕುವುದರ ಮೂಲಕ.

ಪಿ. ಜಯವಂತ ಪೈ, ಕುಂದಾಪುರ
ಮಷೀನ್ ಗನ್‌ಗೂ, ಟ್ಯಾಂಕರ್‌ಗೂ ವ್ಯತ್ಯಾಸವೇನು?
ಅದು ಹೊತ್ತವನನ್ನು ರಕ್ಷಿಸುತ್ತದೆ, ಇದು ಹೊತ್ತು ರಕ್ಷಿಸುತ್ತದೆ.

ಕೆ. ವೀರಭದ್ರಯ್ಯ, ಕೊರಟಗೆರೆ
ಸುಂದರಮೂರ್ತಿ ಸೌಂದರ್ಯಳನ್ನು ಮದುವೆಯಾದರೆ ಅವರ ಮಗುವಿಗೆ ಏನೆಂದು ಹೆಸರಿಡುತ್ತಾರೆ?
ಹ್ಯಾಂಡ್ಸಮ್ ಮತ್ತು ಬ್ಯೂಟಿಯ ಅಕ್ಷರಗಳನ್ನು ಹೆಕ್ಕಿ 'ಹ್ಯಾಟ್'.

ಜಗದೀಶ ಬಿ. ಹೊಸೂರು, ಮೈಸೂರು
ಸ್ಥಳೀಯ ಸಂಸ್ಥೆಗಳು ಸ್ವಚ್ಛತಾ ನಿರ್ವಹಣೆಯಲ್ಲಿ ಏಕೆ ವಿಫಲವಾಗುತ್ತಿವೆ?
ಸ್ವಚ್ಛತೆಗೆಂದು ಹಣವಿರಿಸಿದ್ದ ತಿಜೋರಿಯೇ ಫುಲ್ ಕ್ಲೀನ್ ಆಗಿಬಿಟ್ಟಿದ್ದರಿಂದ.

ಜೀವಿ, ಗೊಂಡೇದಹಳ್ಳಿ
ಅಂದು ಒಬ್ಬನ ದುಡಿಮೆಯಲ್ಲಿ ನೆಮ್ಮದಿಯ ಕುಟುಂಬ; ಇಂದು ಇರುವ ಇಬ್ಬರೂ ದುಡಿದರೂ ನೆಮ್ಮದಿಯಿಲ್ಲವಲ್ಲ?
ಅಂದಿಗಿಂತ ಹಣ ಹೆಚ್ಚಿತಲ್ಲ. ಹಣ ಸೇರಿದಷ್ಟೂ ಅಗತ್ಯತೆ, ಬಡತನ ಹೆಚ್ಚುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಈ ಉಪವಾಸ ಸತ್ಯಾಗ್ರಹ ಹುಟ್ಟಿದ್ದು ಎಲ್ಲಿಂದ?
ಕೋಪಗೃಹದಿಂದ; ಕೈಕೇಯಿಯೇ ಮೊದಲ ಉಪವಾಸ ಸತ್ಯಾಗ್ರಹಿ.

ಮಲ್ಲಿಕಾರ್ಜುನ, ಸುರಧೇನುಪುರ
ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ. ವಾರಗಿತ್ತಿಯರ ಜಗಳ?
ಮನ, ಮನೆ ಮುರಿಯುವ ತನಕ.

## ವಾರದ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಹಿಂದೆ ಮನೆ ಕಾಯಲು ನಾಯಿ ಸಾಕುತ್ತಿದ್ದೆವು. ಈಗ ನಾಯಿ ಕಾಯಲು ಜನರನ್ನು ಇಡುವಂತಾಗಿದೆಯಲ್ಲ?
ಸಂಚಿತ ಫಲವಂತೆ! ನಾಯಿಗೆ ಶುಕ್ರದೆಸೆ, ಮನುಷ್ಯರಿಗೆ ನಾಯಿಪಾಡು!

ರಾಜಶೇಖರ ಹಾದಿಮನಿ, ಧಾರವಾಡ
ದಗಾಕೋರ ಪತಿ; ಪ್ರಾಮಾಣಿಕ ಸತಿ. ಹೀಗಿದ್ದರೆ ಸಂಸಾರದ ಗತಿ?
ಪತಿಯದು ಮೇಲುಗೈಯಾದರೆ ಸಿರಿವೈಭವ; ಸತಿಯದು ಮೇಲುಗೈಯಾದರೆ ಗುಣವೈಭವ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಹಿಂಸಿಸುವ, ಪೀಡಿಸುವ ಕನ್ನಡದ ಪ್ರತಿ ಸೀರಿಯಲ್ ಮುಗಿದಾಗಲೂ ಅನಿರ್ವಚನೀಯ ಅನುಭಾವವೆನಗೆ. ನಿನಗೆ?
'ಮಾನಸಿಕ ಸ್ವಾಸ್ಥ್ಯಕ್ಕೆ ಸೀರಿಯಲ್ ವೀಕ್ಷಣೆ ವರ್ಜ್ಯ' ಎಂದರಿತ ನನಗೆ ಈ ತೊಂದರೆಯೇ ಇಲ್ಲ.

ಹೆಚ್.ವಿ. ಶ್ರೀಧರ್, ಬೆಂಗಳೂರು
'ನೀನು ಸುಖಪುರುಷ ಬಿಡಪ್ಪ' ಎನ್ನುತ್ತಾರೆ. 'ನೀನು ಸುಖಮಹಿಳೆ' ಎನ್ನುವುದಿಲ್ಲವಲ್ಲ?



ಪುರುಷನಿಗೆ 'ಆ ಮೂರು ದಿನಗಳ ನೋವು' ಇಲ್ಲವಲ್ಲ.

ಶಿಮೊಗ್ಗೆ ರಮೇಶ್, ಮೈಸೂರು
ಪುಢಾರಿ, ಉದ್ಯೋಗಿಗಳು ಬಂಧನಕ್ಕೊಳಗಾದಾಗ ಎದೆನೋವು ತಪ್ಪದು. ಬಂಧಿತರಾದ ಸ್ವಾಮೀಜಿಗೂ ಎದೆ ನೋಯಿತಲ್ಲ?
ಇದು 'ಅರೆಸ್ಟ್ ವೈರಸ್'ನಿಂದ ಉಂಟಾಗುವ ನೋವು. 'ಬೇಯ್ಲ್' ಇದಕ್ಕೆ ಪರಮೌಷಧ.

ರವಿಕಾಂತ ಎಂ.ಕೆ. ತುಮಕೂರು
ಸಮಯಕ್ಕೆ ಒಂದು ಸುಳ್ಳು ಹೇಳುವುದು ರಾಜಕಾರಣಿಯೊ, ಸರ್ಕಾರಿ ಅಧಿಕಾರಿಯೊ, ಶ್ರೀಸಾಮಾನ್ಯನೊ?
ಪ್ರೇಮಿ.

■ ರಾಮ್